ಕರ್ನಾಟಕ ವಿಧಾನ ಸಭೆ

ಶುಕ್ರವಾರ 24ನೇ ಮಾರ್ಚ್ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 20.ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ

ಪೀಠವನ್ನು ಅಲಂಕರಿಸಿದರು.

ಅಧ್ಯಕ್ಷರು: ಈಗ ಒಂದು ಪ್ರಕಟಣೆ ಇದೆ.

1. ಪ್ರಕಟಣೆ

ವಿಧಾನಸಭೆಯಲ್ಲಿ ಸಭಾ ನಾಯಕರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ದಿನಾಂಕ 20.03.2006ರಂದು ಪತ್ರವನ್ನು ಬರೆದು ಮಾನ್ಯ ಸದಸ್ಯರಾದ ಶ್ರೀ ಹೆಚ್.ಕೆ. ಕುಮಾರಸ್ವಾಮಿ, ಶಾಸಕರು (ಬೇಲೂರು) ಅವರು ವಿಧಾನಸಭೆಯಲ್ಲಿ ಜನತಾದಳ (ಜಾತ್ಯಾತೀತ) ಶಾಸಕಾಂಗ ಪಕ್ಷದ ಉಪ ನಾಯಕರಾಗಿರುತ್ತಾರೆಂದು ಹಾಗೂ ಮಾನ್ಯ ಶಾಸಕರಾದ ಡಾಃ ಕೆ. ಅನ್ನದಾನಿ, ಶಾಸಕರು (ಮಳವಳ್ಳಿ) ಅವರು ವಿಧಾನಸಭೆಯಲ್ಲಿ ಜನತಾದಳ (ಜಾತ್ಯಾತೀತ) ಶಾಸಕಾಂಗ ಪಕ್ಷದ ಸಚೇತಕರಾಗಿರುತ್ತಾರೆಂದು ತಿಳಿಸಿರುತ್ತಾರೆ.

ಅಧ್ಯಕ್ಷರು: ಪ್ರಶ್ನೋತ್ತರ, ಮಾನ್ಯ ದಿನೇಶ್ ಗುಂಡೂರಾಯರು ತಮ್ಮ ಪ್ರಶ್ನೆ ಕೇಳಿ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ಜನತಾದಳ (ಜಾತ್ಯಾತೀತ ಶಾಸಕಾಂಗ ಮಾನ್ಯ ಕುಮಾರಸ್ವಾಮಿಯವರನ್ನು ನಾಯಕರೆಂದು ಪರಿಗಣಿಸಿದೆ ಮಾನ್ಯ ಸಭಾಧ್ಯಕ್ಷರು ನೀಡಿರುವ ತೀರ್ಪನ್ನು ಪುನರ್ ಪರಿಶೀಲಿಸಲು ಕೋರಿಕೆಯ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ತಮ್ಮ ರೂಲಿಂಗ್‌ಗೆ ನಾವು ವಿರುದ್ಧವಾಗಿ ಹೇಳುತ್ತಿಲ್ಲ. ನಿಮಗೆ ಅಧಿಕಾರ ಇದೆ. ರೂಲಿಂಗ್ ನಿಮ್ಮ ವಿವೇಚನೆಗೆ ಬಿಟ್ಟಿದ್ದು, ರೂಲಿಂಗ್ ಕೊಟ್ಟಿದ್ದೀರಿ. ಆದರೆ ಅವರ ಸಸ್ಪೆನ್‌ಷನ್ ರಿವೂಕೇಷನ್ ಆಗಿಲ್ಲವಲ್ಲಾ.

ಅಧ್ಯಕ್ಷರು : ಯಾವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಕುಮಾರಸ್ವಾಮಿಯವರದ್ದು....

ಅಧ್ಯಕ್ಷರು: ಅದು ನೋಡಿ ಸ್ವಾಮಿ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನೀವು ಪತ್ರಿಕೆಯಲ್ಲಿ ನೋಡಿದ್ದೀರಿ.

ಅಧ್ಯಕ್ಷರು: ದಯಮಾಡಿ ಮಾನ್ಯ ಖರ್ಗೆಯವರೆ, ನಾನು ಹೇಳುತ್ತಿದ್ದೇನೆ, ಜನತಾದಳದ ಶಾಸಕಾಂಗದ ನಾಯಕರು ಎಂದು ಹೆಚ್.ಡಿ.ಕುಮಾರಸ್ವಾಮಿಯವರನ್ನು ನಾನು ಮಾನ್ಯ ಮಾಡಿದ್ದೇನೆ. ಅವರು ಪತ್ರ ಬರೆದು ತಿಳಿಸಿದ್ದಾರೆ. ನಾನು ಅದನ್ನು ಮಾನ್ಯ ಮಾಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಮಾನ್ಯ ಮಾಡಿದ್ದೀರಿ, ಅದನ್ನು ನಾವು ಇಲ್ಲವೆಂದು ಹೇಳುವುದಿಲ್ಲ. ನಿಮಗೆ ರೂಲಿಂಗ್ ಕೊಡುವುದಕ್ಕೆ ಅಧಿಕಾರ ಇದೆ ಮಾನ್ಯತೆ ಮಾಡುವುದಕ್ಕೆ ಅಧಿಕಾರ ಇದೆ. ಸರ್ವಾಧಿಕಾರ ಇದೆ ಅದನ್ನು ಇಲ್ಲಿ ನಾವು ಪ್ರಶ್ನೆ ಮಾಡುವುದಿಲ್ಲ. ಆದರೆ ಅವರು ಯಾವ ಪಕ್ಷಕ್ಕೆ ಸೇರಿದ್ದಾರೋ ಅಥವಾ ಯಾವ ಪಕ್ಷದಿಂದ ಸದಸ್ಯತ್ವ ಹೊಂದಿದ್ದಾರೋ ಆ ಪಕ್ಷದ ರಾಷ್ಟ್ರೀಯ ನಾಯಕರು, ಇಲ್ಲೆ ರಾಜ್ಯದ ಅಧ್ಯಕ್ಷರಾದಂತಹ ಶ್ರೀಮಾನ್ ತಿಪ್ಪಣ ಅವರಿಗೂ ಸೇರಿ 39 ಜನರಿಗೆ ನಾನು ಸಸ್ಪೆಂಡ್ ಮಾಡಿದ್ದೇನೆ ಎಂದು ಈಗಾಗಲೇ ಹೇಳಿದ್ದಾರೆ, ಅದು ತಮಗೂ ಕೂಡ ಗೊತ್ತಿದೆ. ಇದು ಪತ್ರಿಕೆಯಲ್ಲೆಲ್ಲಾ ಬಂದು ಇಡೀ ದೇಶದ ತುಂಬಾ ಒಂದು ನ್ಯೂಸ್ ಆಯಿತು. ಆಗ ಇದು ಮಾಡಿದ್ದು ಸರಿ ಎಂದೇಳಿ ಆ ಪಕ್ಷದ ಉನ್ನತ ಮಟ್ಟದ ಪಾರ್ಲಿಮೆಂಟರಿ ಬೋರ್ಡ್ ಕೂಡ ಅಪ್ರೂವ್ ಮಾಡಿತು. ಪುನಃ ಅವರು ಯಾವುದೋ ಒಂದು ಸಂದರ್ಭದಲ್ಲಿ, ಇಲ್ಲ ನಾನು ಅದನ್ನು ಅವರಿಗೆ ಮಾನ್ಯತೆ ಮಾಡಿದ್ದೇನೆ, ಮಾನ್ಯ ಪ್ರಕಾಶ್‌ರವರೂ ಕೂಡ ಪಕ್ಷದ ಅಧ್ಯಕ್ಷರು ಎಂದು ಹೇಳಿದ ಮೇಲೆ ಅವರ ಪಕ್ಷದ ಪಾರ್ಲಿಮೆಂಟರಿ ಬೋರ್ಡ್‌ನವರು ರಿಯಾಕ್ಟ್ ಮಾಡಿದರು. ಅವರು ಇಲ್ಲಿ ಮಾಡಿದ್ದು ಸರಿಯಲ್ಲ, ನಮ್ಮನ್ನು ಯಾರೂ ಕೇಳಿ ಮಾಡಿಲ್ಲ ಎಂದ ತಕ್ಷಣವೇ ಮಾನ್ಯ ರಾಷ್ಟ್ರೀಯ ಪಕ್ಷದ ನಾಯಕರಾದ ದೇವೇಗೌಡರು ಏನು ಹೇಳಿದರು ಎಂದರೆ, ಇಲ್ಲ ಇಲ್ಲ ನಾನು ಇನ್ನು ರಿವೋಕ್ ಮಾಡಿಲ್ಲ, ಅವರು ಸಸ್ಪೆನ್ಷನಲ್ಲೆ ಇದ್ದಾರೆ ಎನ್ನತಕ್ಕ ಮಾತು ಹೇಳಿದ್ದಾರೆ. ತಮಗೆ ಯಾರು ಪತ್ರ ಬರೆದಿದ್ದರು ಅಂದರೆ ಮಾನ್ಯ ತಿಪ್ಪಣ್ಣನವರು, ರಾಷ್ಟ್ರೀಯ ನಾಯಕರಿಂದ ಸಸ್ಪೆಂಡ್ ಆದಂತಹ ಅಧ್ಯಕ್ಷರು ಮತ್ತು ಇಲ್ಲಿ ಏನು ಈ ಸದನದ ನಾಯಕರಾಗಿದ್ದಾರೆ ಅವರೂ ಸಸ್ಪೆಂಡ್ ಆದಂತಹ ಸದಸ್ಯರು. ಅದಕ್ಕೆ ನೀವು ಮಾನ್ಯತೆ ಮಾಡಬೇಕಾದರೆ ಮಾನ್ಯತೆ ಇರುವಂತಹ ಅಧ್ಯಕ್ಷರಿಂದ ಪತ್ರ ಬಂದರೆ, ಅವರು ಇಂತಹ ರೆಕಗ್ನೈಸ್ ಪಾರ್ಟಿ ಲೀಡರ್ ಎಂದು ಹೇಳುವುದಕ್ಕೆ ಹಕ್ಕಿದೆ, ಅದು ನಿಮಗೆ ಬಿಟ್ಟಂತಹ ಮಾತು. ಅದನ್ನು ನೀವು ಮಾನ್ಯತೆ ಮಾಡಿದ್ದೇನೆ ಎಂದಾಗ ಅನೇಕ ಸಾರಿ ರೂಲಿಂಗ್ ಕೂಡ ಇದೆ. ಯಾವುದೇ ಒಂದು ತಪ್ಪು ರೂಲಿಂಗ್ ಕೊಟ್ಟರೆ ಅದನ್ನು ಪುನರ್ ಪರಿಶೀಲನೆ ಮಾಡತಕ್ಕಂಥ ಹಕ್ಕು ತಮಗೆ ಇದೆ. ಅದಕ್ಕೆ ನಾನು ತಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಇದೆಲ್ಲಾ ಪ್ರಿಸಿಡೆಂಟ್ಸ್, ಬರುವಂತಹ ಯಾವುದೇ ಒಂದು ಸಂದರ್ಭ ಇರಬಹುದು, ಇಂತಹ ಸಂದರ್ಭಗಳು ಬಂದಾಗ ಇವೆಲ್ಲವನ್ನೂ ಕೂಡ ಜನ ಎಕ್ಸಾಂಪಲ್ ಆಗಿ ಕೋಟ್ ಮಾಡುತ್ತಾರೆ. ಆದುದರಿಂದ ದಯವಿಟ್ಟು ತಮ್ಮ ರೂಲಿಂಗ್ ಅನ್ನು ಪುನರ್ ಪರಿಶೀಲನೆ ಮಾಡಿ ಸಸ್ಪೆಂಡ್ ಆದಂತಹ ಒಬ್ಬ ವ್ಯಕ್ತಿಗೆ ಈ ಸದನದ ನಾಯಕರನ್ನಾಗಿ ಮಾಡುವುದು ಸರಿಯಲ್ಲ, ಸಸ್ಪೆಂಡ್ ಆದಂತಹ ಅಧ್ಯಕ್ಷರ ಪತ್ರದ ಮೇಲೆ ರೆಕಗ್ನೈಸ್ ಮಾಡುವುದು ಸರಿಯಲ್ಲ. ಈ ಹಿಂದೆ ಕೂಡ ಜೆಡಿಎಸ್ ನಾಯಕತ್ವ ಯಾರಿಗೆ ಎಂದು ತಮ್ಮ ನೇತೃತ್ವದಲ್ಲೆ ನಡೆದಂತಹ ಸಭೆಯಲ್ಲಿ ಮಾನ್ಯ ಪ್ರಕಾಶ್‌ರವರೇ ಹೇಳಿದ್ದಾರೆ. ಜೆಡಿಎಸ್ ಶಾಸಕಾಂಗದ ಪಕ್ಷದ ನಾಯಕ ನಾನೇ ಇದ್ದೇನೆ, ಎನ್ನುವಂತಾದ್ದು ಯಾವ ದಿವಸ ನಿಮಗೆ ಅಪ್ಲಿಕೇಷನ್ ಬಂದಿತ್ತು, ಆ ದಿವಸದ ಜಡ್ಜ್‌ಮೆಂಟ್ ಯಾವ ದಿವಸ ನಾವಿಲ್ಲಿ ತಕರಾರು ಹಾಕಿದ್ದೇವೆ. ಆ ತಕರಾರು ಹಾಕಿದ ದಿವಸದ ಸ್ಟೇಟಸ್ ಏನು? ಏನು ಪೊಸಿಷನ್ ಇತ್ತು? ಆ ಪೊಸಿಷನ್ ಮೇಲೆ ಇವತ್ತು ನಿಮ್ಮ ನಿರ್ಣಯ ಬರುತ್ತದೆಯೇ ಹೊರತು ಇವತ್ತಿನದಲ್ಲ.

ಅವತ್ತು ನಾನೇ ನಾಯಕ ಎಂದು ಅವರೇ ಹೇಳಿಕೊಂಡಾಗ ಇವತ್ತು ಯಾವ ಆಧಾರದ ಮೇಲೆ ತಾವು ರೆಕಗ್ನೈಸ್ ಮಾಡುತ್ತೀರಿ ಸ್ವಾಮಿ? ಅದಕ್ಕೆ ನಿಮ್ಮಲ್ಲಿ ನಾನು ಪುನಃ ಮನವಿ ಮಾಡಿಕೊಳ್ಳುತ್ತೇನೆ. ರಾಂಗ್ ಪ್ರಿಸಿಡೆಂಟ್ ಆಗಬಾರದು. ಮತ್ತೆ ತಪ್ಪು ಪ್ರಿಸಿಡೆಂಟ್ ಆದರೆ ಇಡೀ ದೇಶಕ್ಕೆ ತಮ್ಮ ರೂಲಿಂಗ್ಸ್ ಏನಿದೆ ಆ ಪುಸ್ತಕದಲ್ಲಿ ಒಂದು ಸಾರಿ ಹೋದರೆ ಪದೇ ಪದೇ ಅದೇ ಕೋಟ್ ಮಾಡುತ್ತಾರೆ. ಅದಕ್ಕೆ ನಾನು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ದಯವಿಟ್ಟು ತಮ್ಮ ತೀರ್ಪನ್ನು ಪುನರ್ ಪರಿಶೀಲನೆ ಮಾಡಿ, ಸಸ್ಪೆಂಡ್ ಆಗಿರುವವರನ್ನು ನಾಯಕರನ್ನಾಗಿ ಮಾಡುವುದಕ್ಕೆ ಹೋಗಬೇಡಿ. ಈಗಾಗಲೇ ಈ ಸರ್ಕಾರಕ್ಕೆ ಮಾನ್ಯತೆ ಇಲ್ಲ, ಘನತೆ ಇಲ್ಲ, ಗೌರವ ಇಲ್ಲ ಜನ ಹೊರಗಡೆ ನೋಡಿ ನಗುತ್ತಿದ್ದಾರೆ. ಅಂತಹದ್ದರಲ್ಲಿ ತಾವು ಸ್ಪೀಕರ್ ಆಗಿ ಅದಕ್ಕೆ ಮಾನ್ಯತೆ ಕೊಟ್ಟರೆ ಖಂಡಿತವಾಗಿ ನಮಗೆ ಒಳ್ಳೆಯ ಹೆಸರು ಬರುವುದಿಲ್ಲ. ಮತ್ತು ಸದನಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ. ಪುನರ್ ಪರಿಶೀಲನೆ ಮಾಡತಕ್ಕಂಥ ಅನೇಕ ರೂಲಿಂಗ್‌ಗಳಿವೆ ಅದರ ಪ್ರಕಾರ ತಾವು ಪುನರ್ ಪರಿಶೀಲನೆ ಮಾಡಿ ಅದರ ಪ್ರಕಾರ ಪುನರ್ ಪರಿಶೀಲನೆ ಮಾಡಿ ಮುಂದಿನ ಕ್ರಮವನ್ನು ಜರುಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ದಿನೇಶ್ ಗುಂಡುರಾಯರು...

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ನಾವು ನಿನ್ನೆ ಮೊನ್ನೆಯಿಂದ ನೋಡುತ್ತಿದ್ದೇವೆ. ಮಾಡಬೇಕಾಗಿರುವಂತಹ ಚರ್ಚೆಯ ವಿಚಾರ ಬಿಟ್ಟು ಬೇರೆ ವಿಚಾರಗಳಿಗೆ ಸದನ ಹೋಗುತ್ತಿರುವುದನ್ನು ನೋಡುತ್ತಿದ್ದೇವೆ. ನಾನು ತಮಗೆ ಮನವಿ ಮಾಡಿಕೊಳ್ಳುವುದಿಷ್ಟೆ, ತಮ್ಮ ರೂಲಿಂಗ್ ಅನ್ನು ಪ್ರಶ್ನೆ ಮಾಡಬಾರದೆಂದು ಗೊತ್ತಿದ್ದರೂ, ಇವತ್ತು ರೂಲಿಂಗ್ ತಪ್ಪು ಎಂದು ಪ್ರೆಸ್ ಮಾಡಿ ಹೇಳುತ್ತಿದ್ದಾರೆ. ರೂಲಿಂಗ್ ತಪ್ಪು ಎಂದು ಹೇಳುವುದು ಸರಿಯೇ ತಪ್ಪೇ ಎಂದು ದಯಮಾಡಿ ಮಾನ್ಯ ಹಿರಿಯ ಸದಸ್ಯರು ಯೋಚನೆ ಮಾಡಬೇಕು. ನಿಮ್ಮ ಜಡ್ಜ್‌ಮೆಂಡ್ ಪ್ರೆಸ್ ಮಾಡಲಿ. ನಿಮ್ಮ ಜಡ್ಜ್‌ಮೆಂಟ್ ಅನೌನ್ಸ್ ಮಾಡಿ ಎಂದು ಕೇಳಲಿ ಅದು ಬಿಟ್ಟು ಇವತ್ತು ಮಾನ್ಯ ತಿಪ್ಪಣ್ಣನವರು ಅಧ್ಯಕ್ಷರಾಗಿದ್ದನ್ನು ಸಸ್ಪೆಂಡ್ ಮಾಡಿದ್ದಾರೆ ನಮ್ಮ ರಾಷ್ಟ್ರ ನಾಯಕರು ಎಂದರೆ ಅಂದಿನ ದಿನ ಅವರು ಅಧ್ಯಕ್ಷರಾಗಿದ್ದರು ಎನ್ನುವುದನ್ನು ತಾವು ದಯಮಾಡಿ ಸದನದಲ್ಲೆ ಇರತಕ್ಕಂಥವರು ಹಿರಿಯರು ಅರ್ಥ ಮಾಡಿಕೊಳ್ಳಬೇಕು. ಅವರು ಅಧ್ಯಕ್ಷರಾಗಿದ್ದಾಗ ಅವರ ಅಧಿಕಾರವನ್ನು ಚಲಾಯಿಸಿದ್ದಾರೆ. ತಾವು ಅವತ್ತಿನ ಅಧ್ಯಕ್ಷರು ಕೊಟ್ಟಿರತಕ್ಕಂಥ ನಿರ್ಣಯವನ್ನು ಶಾಸಕಾಂಗ ಪಕ್ಷ ತೆಗೆದುಕೊಂಡಂತಹ ನಿರ್ಣಯದ ಮೇಲೆ ತಾವು ರೂಲಿಂಗ್ ಕೊಟ್ಟಿದ್ದೀರಿ. ಇದಾದಮೇಲೆ ನಡೆದಿರತಕ್ಕಂಥ ಪಕ್ಷದ ಆಂತರಿಕ ಬೆಳವಣಿಗೆಯನ್ನು ನಾವು ಹೊರಗಡೆ ಹೇಳಿಕೊಳ್ಳುತ್ತೇವೆ. ಅವರೂ ಸಹ ಜನರಿಗೆ ಹೇಳಿಕೊಳ್ಳಲಿ. ಜನ ತೀರ್ಮಾನ ಮಾಡುತ್ತಾರೆ. ಜಡ್ಜ್‌ಮೆಂಟ್ ಅನ್ನು ಪ್ರೆಸ್ ಮಾಡಲಿ, ಆದರೆ ಪದೇ ಪದೇ ತಾವು ಕೊಟ್ಟಿರತಕ್ಕಂಥ ರೂಲಿಂಗ್ ಅನ್ನು ರಿವ್ಯೂ ಮಾಡಿ ರಿವ್ಯೂ ಮಾಡಿ ಎಂದು ಹೇಳತಕ್ಕಂಥಾದ್ದು ಸೂಕ್ತವಲ್ಲ. ದಯಮಾಡಿ ಇದನ್ನು ಮತ್ತೆ ಮತ್ತೆ ಪ್ರೆಸ್ ಮಾಡುವುದಕ್ಕೆ ಹೋದಂತಹ ಸಂದರ್ಭದಲ್ಲಿ ನಿನ್ನೆ ಆದಂತಹ ವಾತಾವರಣ ಏನಿದೆ, ಅದನ್ನು ಮತ್ತೆ ಗೊಂದಲ ಮಾಡತಕ್ಕಂಥಾದ್ದು ಬೇಡವೆಂದು ನಾನು ತಮ್ಮ ಮೂಲಕ ಸ್ಪಷ್ಟವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಆಯಿತು